# ಸುದ್ದಿ ಸಂಚಯ

## ರಾಮಕೃಷ್ಣ ವಿದ್ಯಾಕೇಂದ್ರದ ಶಾಲೆಯಲ್ಲಿ ಓದುತ್ತಿರುವ ವಿದ್ಯಾರ್ಥಿ ಮಾಸ್ಟರ್ ವಿಜಯ್‌ಗೆ ರಾಷ್ಟ್ರೀಯ ಬಾಲಶ್ರೀ ಪ್ರಶಸ್ತಿ



ದೆಹಲಿಯ ರಾಷ್ಟ್ರಪತಿ ಭವನದಲ್ಲಿ, ೨೦೦೧ ಏಪ್ರಿಲ್ ೧೯ರಂದು ನಡೆದ ಸಮಾರಂಭದಲ್ಲಿ ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲಗಳ ಇಲಾಖೆಯ ಮಾನ್ಯ ಮಂತ್ರಿಗಳಾದ ಶ್ರೀಮುರಳೀಮನೋಹರ ಜೋಷಿಯವರ ಉಪಸ್ಥಿತಿಯಲ್ಲಿ ಭಾರತದ ಪ್ರಥಮ ಮಹಿಳೆ ಶ್ರೀಮತಿ ಉಷಾ ನಾರಾಯಣನ್‌ರವರು ಮಾಸ್ಟರ್ ವಿಜಯ್‌ಗೆ ಬಾಲಶ್ರೀ ರಾಷ್ಟ್ರಪ್ರಶಸ್ತಿಯನ್ನು ನೀಡುತ್ತಿರುವರು.

**ಮೈಸೂರು** ರಾಮಕೃಷ್ಣ ಆಶ್ರಮದ ಮಾರ್ಗದರ್ಶನಲ್ಲಿ ನಡೆಯುತ್ತಿರುವ ರಾಮಕೃಷ್ಣ ಸೇವಾಸಂಘದ ಆಡಳಿತಕ್ಕೆ ಒಳಪಟ್ಟ ರಾಮಕೃಷ್ಣ ವಿದ್ಯಾಕೇಂದ್ರದಲ್ಲಿ ೬ನೆ ತರಗತಿಯ ಪ್ರತಿಭಾವಂತ ವಿದ್ಯಾರ್ಥಿ ಮಾಸ್ಟರ್ ವಿಜಯ್‌ಗೆ ರಾಷ್ಟ್ರೀಯ ಬಾಲಶ್ರೀ ಪ್ರಶಸ್ತಿ ಸಂದಿದೆ. ಹನ್ನೊಂದು ವರ್ಷದ ಈ ಬಾಲಕ ಕರ್ನಾಟಕಕ್ಕೇ ಪ್ರಪ್ರಥಮ ಬಾರಿಗೆ ಈ ಪ್ರಶಸ್ತಿಯನ್ನು ತಂದುಕೊಟ್ಟ ಶ್ರೇಷ್ಠ ಬಾಲ ನಟನಾಗಿದ್ದಾನೆ. ಸಧ್ಯದಲ್ಲೇ ಮಂಗೋಲಿಯಾದಲ್ಲಿ ನಡೆಯಲಿರುವ ಅಂತರರಾಷ್ಟ್ರೀಯ ಮಕ್ಕಳ ಉತ್ಸವದಲ್ಲಿ ಭಾಗಿಯಾಗಲು ಈ ವಿದ್ಯಾರ್ಥಿ ಆಯ್ಕೆಯಾಗಿದ್ದಾನೆ

ಈ ಹುಡುಗನ ಪ್ರತಿಭೆಯನ್ನು ಪ್ರೋತ್ಸಾಹಿಸಲು ಶಾಲೆಯಲ್ಲಿ ಜೂನ್ ೨೮ನೆ ಗುರುವಾರದಂದು ಸರಳ ಸಮಾರಂಭವೊಂದನ್ನು ಏರ್ಪಡಿಸಲಾಗಿತ್ತು. ಸಮಾರಂಭದ ಅಧ್ಯಕ್ಷತೆಯನ್ನು ಆಶ್ರಮದ ಅಧ್ಯಕ್ಷರಾದ ಸ್ವಾಮಿ ಆತ್ಮವಿದಾನಂದಜಿಯವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಮೈಸೂರಿನ ಜನಪ್ರಿಯ ಸ್ಟಾರ್ ಆಫ್ ಮೈಸೂರು ಪತ್ರಿಕೆಯ ಸಂಪಾದಕರಾದ ಶ್ರೀ ಕೆ.ಬಿ. ಗಣಪತಿಯವರು ಈ ಬಾಲಕ ನಾಡಿನ ಕೀರ್ತಿಯ ಕಲಾವಿದನಾಗಿ ಬೆಳೆಯಲಿ ಎಂದು ಹರಸಿದರು. ಪೂಜ್ಯ ಸ್ವಾಮಿ ಆತ್ಮವಿದಾನಂದಜಿಯವರು "ಈ ಬಾಲಕನ ತಂದೆ ತಾಯಿಯರ ಒತ್ತಾಸೆಯಿಂದ ಹಾಗೂ ಶಾಲೆಯಲ್ಲಿ ಅಧ್ಯಾಪಕ ವರ್ಗದವರ ಪ್ರೋತ್ಸಾಹದ ಮಾರ್ಗದರ್ಶನದಿಂದ ಅವನಲ್ಲಿ ದೈವದತ್ತವಾಗಿರುವ ಸುಪ್ತಪ್ರತಿಭೆ ಅರಳಲಿ" ಎಂದು ಮನತುಂಬಿ ಆಶೀರ್ವದಿಸಿದರು. ಸಮಾರಂಭದಲ್ಲಿ ರಾಮಕೃಷ್ಣ ಆಶ್ರಮದ ಪೂಜ್ಯ ಸ್ವಾಮೀಜಿಯವರುಗಳು, ರಾಮಕೃಷ್ಣ ಸೇವಾ ಸಂಘದ ಸದಸ್ಯರು, ಹಾಗೂ ಶಾಲೆಯ ಶಿಕ್ಷಕ ವೃಂದದವರು ಪಾಲ್ಗೊಂಡಿದ್ದರು. ❋

## ಅಲಸೂರಿನ ವಿವೇಕಾನಂದ ಆಶ್ರಮದಲ್ಲಿನ ವಿಶೇಷ ಕಾರ್ಯಕ್ರಮಗಳು

### ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ನೋಟ್‌ಬುಕ್‌ಗಳ ವಿತರಣೆ

ಬೆಂಗಳೂರಿನ ಅಲಸೂರು ವಿವೇಕಾನಂದ ಆಶ್ರಮದ ವತಿಯಿಂದ ೨೫೦ ಸೂಕ್ತ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರಿಗೆ ಅವರ ವ್ಯಾಸಂಗದಲ್ಲಿ ನೆರವಾಗಲು ಉಚಿತವಾಗಿ ನೋಟ್ ಪುಸ್ತಕಗಳನ್ನು ಹಂಚಲಾಯಿತು. ದಿನಾಂಕ ೦೭.೦೬.೨೦೦೧ರಂದು ಗುರುವಾರ ಸಂಜೆ ೫ ಗಂಟೆಗೆ ಆಶ್ರಮದಲ್ಲಿ ನಡೆದ ಸಮಾರಂಭದಲ್ಲಿ ವಿನಾಯಕ ಟ್ರಾವೆಲ್ಸ್‌ನ ಮಾಲಿಕರಾದ ಶ್ರೀ ಜಿ.ಎಂ. ತಿಮ್ಮರೆಡ್ಡಿ, ಶ್ರೀ ಟಿ. ಕಮಲಾ ನಾಥ ನಾಯ್ಡು(ಕ್ಲಾಸ್ I. ಪಿ.ಡಬ್ಲ್ಯೂ.ಡಿ. ಗುತ್ತಿಗೆದಾರರು) ಶ್ರೀ ಬಿ. ಶ್ರೀನಿವಾಸ ಗುಪ್ತ (ವ್ಯವಸ್ಥಾಪಕ ನಿರ್ದೇಶಕರು, ಭಾಗ್ಯಲಕ್ಷ್ಮಿ ಆಗ್ರೋ ಇಂಡಸ್ಟ್ರೀಸ್ ಬೆಂಗಳೂರು) ಶ್ರೀ. ಸರ್‌ದಾರ ಮಲ್ ಸೂರಾನಾ (ಮಾರುತಿ ಅಂಡ್ ಕಂಪನಿಯ ಮಾಲೀಕರು) ಮುಂತಾದ ಗಣ್ಯರಿಂದ ನೋಟ್‌ಬುಕ್‌ಗಳು ವಿತರಿತವಾದುವು.

### ವಿದ್ಯಾರ್ಥಿಗಳಿಗೆ ಸಮವಸ್ತ್ರ ಹಾಗೂ ನೋಟ್‌ಬುಕ್ ವಿತರಣೆ

೨೫ನೇ ಜೂನ್ ಸೋಮವಾರದಂದು ಬೆಳಗ್ಗೆ ೧೦.೦೦ ಗಂಟೆಗೆ ಆಶ್ರಮದಲ್ಲಿ ನಡೆದ ಸಮಾರಂಭದಲ್ಲಿ ಆರ್ಥಿಕವಾಗಿ ಹಿಂದುಳಿದ

೧೫೦ ವಿದ್ಯಾರ್ಥಿಗಳಿಗೆ ಸಮವಸ್ತ್ರಗಳನ್ನು ಹಾಗೂ ನೋಟ್ ಬುಕ್ ಗಳನ್ನು ಉಚಿತವಾಗಿ ವಿತರಿಸಲಾಯಿತು. ಶ್ರೀಮತಿ ಸುಧಾ ಗೋಪಾಲ ಕೃಷ್ಣನ್ (ಟ್ರಸ್ಟಿ, ಇನ್‌ಫೋಸಿಸ್ ಫೌಂಡೇಷನ್) ಶ್ರೀ ಎಂ.ಎಸ್. ನಂಜುಂಡಯ್ಯ (ವಿಶ್ವ ಬ್ಯಾಂಕ್‌ನ ಮಾಜಿ ಉನ್ನತ ಸಲಹೆಗಾರರು) ಶ್ರೀ ಪಿ.ಆರ್. ಕೃಷ್ಣ (ಟಾಟಾ ಸ್ಟೀಲ್‌ನ ಮಾರ್ಕೆಟಿಂಗ್ ಕನ್ ಸಲ್‌ಟೆಂಟ್) ಶ್ರೀ ಮಾಸ್ತಿ ಚಂದ್ರಶೇಖರ್ (ಹೋಟೆಲ್ ಶಾರದಾ), ಶ್ರೀ ಎಚ್. ರಾಘವೇಂದ್ರರಾವ್ (ಜನತಾ ಹೋಟೆಲ್‌ನ ಮಾಲೀಕರು) ಹಾಗೂ ಶ್ರೀಮತಿ ವಿಜಯಾ ದತ್ತ (ನಿರ್ದೇಶಕರು, ಇಂಪ್ಯಾಕ್ಟ್ ಸೇಫ್ಟಿ ಗ್ಲಾಸ್ ವರ್ಕ್ಸ್ ಪ್ರೈ. ಲಿಮಿಟೆಡ್) ಮಂತಾದ ಗಣ್ಯರು ಸಮಾರಂಭದಲ್ಲಿ ಉಪಸ್ಥಿತರಿದ್ದರು. ಈ ಎರಡು ಸಮಾರಂಭ ಗಳಲ್ಲಿಯೂ ಆಶ್ರಮದ ಭಕ್ತ ಬಾಂಧವರೆಲ್ಲರೂ ಎಂದಿನಂತೆ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

**ಬಡ ಜನರಿಗೆ ಉಚಿತ ಕಣ್ಣಿನ ಶಸ್ತ್ರ ಚಿಕಿತ್ಸೆ ಹಾಗೂ ದಂತ ತಪಾಸಣೆಯ ಶಿಬಿರ**

ಜೂನ್ ೧೬ ರಂದು ಆಶ್ರಮದ ಆಶ್ರಯದಲ್ಲಿ ತಜ್ಞವೈದ್ಯರಿಂದ ಕಣ್ಣಿನ ಉಚಿತ ತಪಾಸಣೆ (೨೩೦ ಜನರಿಗೆ) ಹಾಗೂ ಶಸ್ತ್ರ ಚಿಕಿತ್ಸೆಯನ್ನು (೫೮ ಜನರಿಗೆ) ಏರ್ಪಡಿಸಲಾಗಿದ್ದಿತು. ಜೂನ್ ೩೦ ರಂದು ದಂತ ತಪಾಸಣೆಯ ಶಿಬಿರವೊಂದನ್ನು ಏರ್ಪಡಿಸಲಾಗಿತ್ತು.

## ಮೈಸೂರಿನ ರಾಮಕೃಷ್ಣ ಆಶ್ರಮದಲ್ಲಿ ವಿವೇಕಶಿಕ್ಷಣದ ಉದ್ಘಾಟನೆ



ಶ್ರೀಯುತ ರಾಮರಾವ್ ವಿವೇಕಶಿಕ್ಷಣವನ್ನು ಉದ್ಘಾಟಿಸುತ್ತಿರುವುದು

"ಕಲಿಕಾ ವಾತಾವರಣವನ್ನು ಕಲ್ಪಿಸಲು ಶಿಕ್ಷಕರು ಶ್ರಮಿಸಬೇಕು. ಮಕ್ಕಳಿಗೆ ಕಲಿಕೆಗೆ ಪ್ರೇರೇಪಣೆ ನೀಡುವುದು ಶಿಕ್ಷಕರ ಹೊಣೆ" ಎಂದು ನುಡಿದವರು ಮೈಸೂರು ವಿಭಾಗದ ಡಿ.ಡಿ.ಪಿ.ಐ ಶ್ರೀಯುತ ರಾಮರಾವ್ ಅವರು. ಅವರು ಮೈಸೂರಿನ ರಾಮಕೃಷ್ಣ ಆಶ್ರಮದ ಸಭಾಂಗಣದಲ್ಲಿ ಜುಲೈ ೪ರಂದು ಸಂಜೆ ಜ್ಯೋತಿ ಬೆಳಗಿಸುವುದರ ಮೂಲಕ ವಿವೇಕ ಶಿಕ್ಷಣದ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಆರ್ಥಿಕವಾಗಿ ಹಾಗೂ ವಿದ್ಯಾಭ್ಯಾಸದಲ್ಲಿ ಹಿಂದುಳಿದ ೯ ಮತ್ತು ೧೦ನೇ ತರಗತಿಯ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗಾಗಿ ಮೌಲ್ಯ ಶಿಕ್ಷಣದೊಂದಿಗೆ ವಿಶೇಷ ನೆರವಿನ ಉಚಿತ ಶಿಕ್ಷಣವನ್ನು ನೀಡುವುದು ಈ ಕಾರ್ಯಕ್ರಮದ ಉದ್ದೇಶವಾಗಿದೆ ಎಂದು ಕಾರ್ಯಕ್ರಮದ ಪ್ರಾರಂಭದಲ್ಲಿ ಎಲ್ಲರನ್ನೂ ಸ್ವಾಗತಿಸುತ್ತಾ, ಆಶ್ರಮದ ಅಧ್ಯಕ್ಷರಾದ ಸ್ವಾಮಿ ಆತ್ಮವಿದಾನಂದಜಿಯವರು ತಿಳಿಸಿದರು ಹಾಗೂ " ಜುಲೈ ನಾಲ್ಕು ಅಮೆರಿಕದ ಸ್ವಾತಂತ್ರ್ಯದಿನೋತ್ಸವವಷ್ಟೇ ಅಲ್ಲದೆ, ಸ್ವಾಮಿ ವಿವೇಕಾನಂದರು ಮಹಾಸಮಾಧಿಯನ್ನು ಹೊಂದಿದ ದಿನವೂ ಆಗಿದೆ. ಸ್ವಾಮೀಜಿ ಕನಸು ಕಂಡ ಶಿಕ್ಷಣದ ಪರಿಕಲ್ಪನೆಯನ್ನು ಸಾಕಾರಗೊಳಿಸುವ ಒಂದು ಪ್ರಾಮಾಣಿಕ ಪ್ರಯತ್ನವೇ ವಿವೇಕಶಿಕ್ಷಣದ ಯೋಜನೆಯಾಗಿ ರೂಪುಗೊಂಡಿದೆ" ಎಂದರು. ಈ ಶೈಕ್ಷಣಿಕ ವರ್ಷದಲ್ಲಿ ೧೬೦ ವಿದ್ಯಾರ್ಥಿ ವಿದ್ಯಾರ್ಥಿನಿಯರು ಈ ಕಾರ್ಯಕ್ರಮದ ಪ್ರಯೋಜನ ವನ್ನು ಪಡೆಯಲಿದ್ದಾರೆ ಎಂದೂ ಅವರು ತಿಳಿಸಿದರು. ಶ್ರೀರಾಮಕೃಷ್ಣ ವಿದ್ಯಾಶಾಲೆಯ ಸಂಯೋಜಕರಾದ ಶ್ರೀಯುತ ಬಿ.ಎಸ್. ಶ್ರೀಕಂಠಯ್ಯನವರು, "ಈ ಯೋಜನೆಯಿಂದ ಸಾಧಾರಣ ಬುದ್ಧಿಶಕ್ತಿಯ ವಿದ್ಯಾರ್ಥಿಗಳು ಪ್ರಯೋಜನವನ್ನು ಪಡೆಯಲೆಂದು ಬಹಳ ಅನುಭವವುಳ್ಳ ಶಿಕ್ಷಕ ವರ್ಗವನ್ನು ನೇಮಿಸಲಾಗಿದೆ. ವಿದ್ಯಾರ್ಥಿಗಳು ತರಗತಿಗಳಿಗೆ ಮತ್ತು ಆಶ್ರಮದಲ್ಲಿ ನಡೆಯುವ ವ್ಯಕ್ತಿತ್ವವಿಕಸನ ಕಾರ್ಯಕ್ರಮಕ್ಕೆ ತಪ್ಪದೆ ಬರುವುದರಿಂದ ಪರೀಕ್ಷೆಯಲ್ಲಷ್ಟೇ ಅಲ್ಲ ಅವರ ಜೀವನದಲ್ಲಿ ಯಶಸ್ವಿಯಾಗುವುದರಲ್ಲಿ ಯಾವುದೇ ಸಂದೇಹವಿಲ್ಲ" ಎಂದು ತಿಳಿಸಿದರು. ಅಧ್ಯಕ್ಷತೆ ವಹಿಸಿದ್ದ ಮಹಾಜನ ವಿದ್ಯಾಸಂಸ್ಥೆಯ ಖ್ಯಾತ ಮುಖ್ಯಸ್ಥರಾದ ಶ್ರೀವಾಸುದೇವ ಮೂರ್ತಿಯವರು, "ಸರಿಯಾದ ವಾತಾವರಣ ಮತ್ತು ಮಾರ್ಗ ದರ್ಶನದಿಂದ ವಿದ್ಯಾರ್ಥಿವಿದ್ಯಾರ್ಥಿನಿಯರು ಉತ್ಕೃಷ್ಟತೆಯನ್ನು ಸಾಧಿಸುವರೆಂಬ ಭರವಸೆ ತಮಗಿದೆ" ಎಂದರು.

*

### ಆಶ್ರಮದ ವಿಶೇಷ ಕಾರ್ಯಕ್ರಮಗಳು

**ಆಗಸ್ಟ್ 2001**

| | | |
|---|---|---|
| 4 | ಶನಿವಾರ | ಸ್ವಾಮಿ ನಿರಂಜನಾನಂದ ಜಯಂತಿ |
| 5 | ಭಾನುವಾರ | ಆಧ್ಯಾತ್ಮಿಕ ಶಿಬಿರ |
| | (ಮಧ್ಯಾಹ್ನ ೩.೦೦ ರಿಂದ ಸಂಜೆ ೭.೦೦ರವರೆಗೆ) | |
| 12 | ಭಾನುವಾರ | ಶ್ರೀಕೃಷ್ಣ ಜನ್ಮಾಷ್ಟಮಿ |
| 18 | ಶನಿವಾರ | ಸ್ವಾಮಿ ಅದ್ವೈತಾನಂದ ಜಯಂತಿ |
| 22 | ಬುಧವಾರ | ಶ್ರೀ ವಿನಾಯಕ ಚತುರ್ಥಿ |

ಪ್ರತಿ ಶನಿವಾರ ಇಂಗ್ಲೀಷಿನಲ್ಲಿ ಮತ್ತು ಗುರುವಾರ ಹಾಗೂ ಭಾನುವಾರ ಕನ್ನಡದಲ್ಲಿ ಸಂಜೆ 6.00 ರಿಂದ 7.00 ರವರೆಗೆ ಆಧ್ಯಾತ್ಮಿಕ ಪ್ರವಚನಗಳು ನಡೆಯುತ್ತವೆ.

ವಿವರಗಳಿಗಾಗಿ ಆಶ್ರಮವನ್ನು ಸಂಪರ್ಕಿಸಿ